ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE ● AFFILIATED TO BANGALORE UNIVERSITY ● AICTE APPROVED ● 2(F) & 12 (B) RECOGNITION OF UGC ● ISO 9001 2015 CERTIFIED
Electronics City P.O. Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – DECEMBER 2024

## KANNADA – I SEMESTER BSC

## 24BSC11K – ವಿಜ್ಞಾನ ಕನ್ನಡ 1

**Max. Marks: 80**

**Time: 3 Hours**

**I. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (200 ಪದಗಳಿಗೆ ಮೀರದಂತೆ)** 3x10=30

1. ಪ್ರಾಚೀನ ತಮಿಳು ಸಂಗಂ ಸಾಹಿತ್ಯದ ವೈಶಿಷ್ಟ್ಯ ಹಾಗೂ ಕನ್ನಡದ ಜೊತೆಗಿನ ಅದರ ಸಂಬಂಧವನ್ನು ವಿವರಿಸಿ.
2. ಪಂಪ, ರನ್ನ, ಹರಿಹರ ಇವರಲ್ಲಿ ಇಬ್ಬರು ಕವಿಗಳನ್ನು ಕುರಿತು ಟಿಪ್ಪಣಿ ಬರೆಯಿರಿ
3. ಪಾಹಂನ ಭೂಮಿಯ ಮೇಲಿನ ಮೋಹದ ವಿವಿಧ ಹಂತಗಳಾವುವು? ವಿವರಿಸಿ.
4. ಒಂಟೆಹುಳುಗಳು ಬೀಡಾ ಕಟ್ಟುವ ವಿಧಾನ ಮತ್ತು ಅದರ ಉದ್ದೇಶವನ್ನು ವಿಶ್ಲೇಷಿಸಿ.

**II. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (100 ಪದಗಳಿಗೆ ಮೀರದಂತೆ)** 5x5=25

1. ಚಿತ್ರದುರ್ಗದ ತಣ್ಣೀರು ಹೊಂಡದ ಶಿಲಾಭಿತ್ತಿಯ ವಿಶೇಷವೇನು?
2. ಕುವೆಂಪು ಕನ್ನಡಿಗರಿಗೆ ಯಾವ ರೀತಿಯ ದೀಕ್ಷೆ ಕೊಡುತ್ತಾರೆ?
3. ಕುರುಡು ನಂಬಿಕೆಗಳು ಹೇಗೆ ದುಷ್ಟ ಮನೋವೃತ್ತಿಯಾಗಿ ಬೆಳೆದಿವೆ?
4. ದುರ್ಯೋಧನನು ಈ ಭೂಮಿ ನನಗೆ ಪಾಳು ಭೂಮಿ ಎಂದುದು ಏಕೆ?
5. ತದ್ಭವದಲ್ಲಿ ಕಚಟತಪಗಳು ಗಜಡದಬಗಳಾಗುವುದನ್ನು ಉದಾಹರಣೆಯೊಂದಿಗೆ ವಿವರಿಸಿ
6. ಬಸವಣ್ಣ ಹೇಳುವ ದೇವರ ಕಲ್ಪನೆ ಎಂತಹುದು?

**III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿ.** 1x5=5

ಕುದುರೆ ಮುಖದ ಗಣಿಗಾರಿಕೆಯಿಂದ ಚಿನ್ನ ಸಿಗುವುದಾದರೂ ನಮಗದು ಬೇಕಾಗಿಲ್ಲ ಎಂದು ನಾವು ತಿಳಿದುಕೊಂಡು ವರ್ತಿಸಬೇಕು. ನಿತ್ಯ ದುಡಿಯುವ ಒಬ್ಬ ಮನುಷ್ಯ ಮತ್ತೆ ನಾಳೆ ದುಡಿಯಲು ಬೇಕಾಗುವ ಆಹಾರವನ್ನು ಸಂಪಾದಿಸುತ್ತಾನೆ. ಹೀಗೆ ದುಡಿಮೆಯಿಂದ ಶಕ್ತಿಯನ್ನು ಪಡೆದು ಅದನ್ನು ದುಡಿಮೆಗೇ ವಿನಿಯೋಗಿಸುತ್ತಾ ಇರುವ ನಮ್ಮ ಅಸಂಖ್ಯ ದುಡಿಮೆಗಾರರು ಪರಾಗಸ್ಪರ್ಶಕ್ಕೆ ಕಾದಿರುವ ಹೂವಿನಂತಿರುತ್ತಾರೆ. ಯಾವುದೋ ದುಂಬಿ ಆಕಸ್ಮಿಕವಾಗಿ ತನ್ನನ್ನು ಬಂದು ಮುಟ್ಟಿತೆನ್ನುವ ಭರವಸೆಯಲ್ಲಿ, ಗಾಳಿಯಲ್ಲಿ ಅಲ್ಲಾಡುತ್ತಾ ಇರುವ ಹೂವಿನ ಹಾಗೆ ಇದ್ದು ಬಿಡುತ್ತಾರೆ. ಯಾವುದೇ ದೈವ ತಮ್ಮನ್ನು ಬಂದು ಮುಟ್ಟಿತೆನ್ನುವ ಭರವಸೆಯಲ್ಲಿ, ಹರಕೆಯಲ್ಲಿ ಬಾಳುತ್ತಾ ನದಿಗಳ ಸಂಗಮದಲ್ಲಿ ಸಹಸ್ರ ಸಂಖ್ಯೆಯಲ್ಲಿ ಮೀಯುತ್ತಾ, ಕಾಲ್ನಡಿಗೆಯಲ್ಲಿ ಯಾತ್ರೆ ಮಾಡುತ್ತಾ ಇರುವ ಅಪಾರ ಜನ ಕೋಟಿ ನಮ್ಮ ದಿನನಿತ್ಯದ ಬದುಕನ್ನು ಅರ್ಥಪೂರ್ಣವನ್ನಾಗಿ ಮಾಡಬಲ್ಲರು. ದೇವರು ಇದ್ದಾನೋ ಇಲ್ಲವೋ ತಿಳಿಯದು. ಪ್ರಾಯಶಃ ಅವನನ್ನು

ಮುಟ್ಟುವ ಭರವಸೆಯಲ್ಲಿ ಎಲ್ಲರೂ ಕೊನೆಗೆ ಸಾಯುವುದೇನೋ? ಹೀಗೆ ನಿತ್ಯದ ದುಡಿಮೆಯ ಕಾಯಕ ಮತ್ತು ಅಗೋಚರವಾದದ್ದರ ಭರವಸೆಯ ಈ ಜೀವನದಲ್ಲಿ ಭಾರತದ ಅಪಾರ ಜನಸಂಖ್ಯೆಗೆ ನಿಜವಾಗಿ ಸುಖ ಸಿಗುವುದು ಮಕ್ಕಳ ಪಾಲನೆ, ಲಾಲನೆ, ಹಬ್ಬ ಹರಿದಿನಗಳ ಊಟ, ಕೊಂಚ ಬಿಡುವಿದ್ದಾಗ ನಡೆಯುವ ಕಾಡು ಹರಟೆ ಇವುಗಳಲ್ಲೇ. ಇದನ್ನು ಈ ಸಂದರ್ಭದಲ್ಲಿ ಮಾತಾಡುವುದೇ ಓದುಗರಿಗೆ ವಿಚಿತ್ರ ಅನ್ನಿಸಬಹುದು. ಆದರೆ ಬದುಕಿನ ಈ ಸ್ಥಾಯೀ ಸ್ವರೂಪವನ್ನು ಮತ್ತು ಅದರ ಸಂಚಾರಿ ಕನಸುಗಳನ್ನು, ಭರವಸೆಗಳನ್ನು ಹೃದಯದಲ್ಲಿ ಅರಿತು ದುಡಿಯುವವರಿಗೆ ದೇಶದ ಉತ್ಪಾದನೆಯನ್ನು ಹೆಚ್ಚಿಸುವ ಈಚಿನ ಅನೇಕ ಯೋಜನೆಗಳು ಕ್ರಿಮಿನಲ್ ವಿಚಾರವಾಗಿ ಭಾಸವಾಗುತ್ತದೆ. ವೇಗವಾಗಿ ಹೋಗುವ ಕಾರುಗಳಿಗಾಗಿ ನಾವು ಮಾಡುವ ರಸ್ತೆಗಳನ್ನು ಕಂಡಾಗ ಒಬ್ಬ ಮುದುಕ, ಮುದುಕಿ ಅಥವಾ ಒಂದು ಮಗು ರಸ್ತೆಯ ಈ ಬದಿಯಿಂದ ಇನ್ನೊಂದು ಬದಿಗೆ ಹೋಗುವುದೇ ಅಸಾಧ್ಯವಲ್ಲವೇ ಅನ್ನುವ ಸಂಕಟ ಉಂಟಾದರೆ ನಾವು ಮನುಷ್ಯರು. ಬದಲಾಗಿ ಎಷ್ಟು ವೇಗವಾಗಿ ಒಂದು ಕಾರು ಸಂಚರಿಸಬಲ್ಲದು ಎಂದು ಯೋಚಿಸಿದರೆ ನಾವು ರಾಕ್ಷಸರು.

**IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ.** 2x1=2

**V. ಇವುಗಳಲ್ಲಿ ಎರಡು ಪದಗಳಿಗೆ ಸ್ವಂತ ವಾಕ್ಯ ರಚಿಸಿ.** 2x2=4

1. ವ್ಯಾಸಂಗ 2. ತಂತ್ರಜ್ಞಾನ 3. ಸಂವಿಧಾನ 4. ಜನಪದ

**VI. ದಾರಿದೀಪ ದುರಸ್ತಿ ಕುರಿತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಪತ್ರ ಬರೆಯಿರಿ.** 1x5=5

**VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** 4x1=4

1. ಬಾಳಲೋಚನ 2. ಹೊನ್ನಗಂಬ 3. ಬೆರಗು

4. ಕುನ್ನಿ 5. ಮಜ್ಜನ 6. ಪುರಾವೆ

**VIII. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** 5x1=5

1. 'ಕನ್ನಡದ ಹಳಮೆ' ಲೇಖನವನ್ನು ಬರೆದವರು ಯಾರು?

   ಅ. ಕೆ.ವಿ. ನಾರಾಯಣ ಆ. ಲಕ್ಷ್ಮಿ ನಾರಾಯಣ್ ಇ. ಡಿ.ಆರ್. ನಾಗರಾಜ್ ಈ. ಚದುರಂಗ

2. ಎಳ್ಳುಜೀರಿಗೆ ಬೆಳೆಯುವವಳು ಯಾರು?

   ಅ. ಭೂಮಿತಾಯಿ ಆ. ಸರಸ್ವತಿ ಇ. ಶಾರದೆ ಈ. ಪಾರ್ವತಿ

3. ಅಕ್ಕಮಹಾದೇವಿಯ ಅಂಕಿತ ಯಾವುದು?

   ಅ. ಕೂಡಲಸಂಗಮದೇವ ಆ. ಚೆನ್ನಮಲ್ಲಿಕಾರ್ಜುನ ಇ. ಗುಹೇಶ್ವರ ಈ. ರಾಮನಾಥ

4. ಕೌಂತೇಯರು ಎಂದರೆ ಯಾರು?

   ಅ. ಪಾಂಡವರು ಆ. ಕೌರವರು ಇ. ಯಾದವರು ಈ. ಮಾಗಧರು

5. ದಿನಪಸುತ ಎನ್ನುವುದು ಯಾರ ಹೆಸರು?

   ಅ. ಕರ್ಣ ಆ. ಸೂರ್ಯ ಇ. ಅರ್ಜುನ ಈ. ಭೀಮ

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY